# ವಾರ್ತಾ ವಿಶ್ಲೇಷಣೆ

## ಆಲೋಚನೆಯ ಶಕ್ತಿ ವಸ್ತುಗಳನ್ನು ಚಲಿಸಬಲ್ಲುದು!

ಮೆದುಳಿನಲ್ಲಿ ಆಗುವ ಬದಲಾವಣೆಗಳನ್ನು ಗುರುತಿಸಿ ಅವನ್ನು ವಿದ್ಯುತ್ ಸಂಜ್ಞೆಗಳಾಗಿ ಪರಿವರ್ತಿಸುವ ಒಂದು ಯಂತ್ರವನ್ನು ಜಪಾನಿನ ಹಿತಾಚಿ ಕಂಪನಿಯು ಹೊರತಂದಿದೆ. ದೂರದಲ್ಲಿರುವ ವಸ್ತುಗಳನ್ನು ಕೇವಲ ಆಲೋಚನೆಗಳಿಂದ ಚಲಿಸುವಂತೆ ಮಾಡುವ ಸಾಮರ್ಥ್ಯವುಳ್ಳವರ ಬಗ್ಗೆ ನೀವು ಕೇಳಿರಬಹುದು. ಇದಕ್ಕೆ ಮನಸ್ಸನ್ನು ತೀವ್ರವಾಗಿ ಏಕಾಗ್ರಗೊಳಿಸಿ ಆ ವಸ್ತುವಿನತ್ತ ಹರಿಸಬೇಕಾಗುತ್ತದೆ. ಆದರೆ ಇದೀಗ ಬಿಡುಗಡೆಯಾಗಿರುವ ಈ ವಿದ್ಯುತ್ ಉಪಕರಣವು ಸಾಮಾನ್ಯ ವ್ಯಕ್ತಿಗಳ ಮನಸ್ಸಿನಲ್ಲೇಳುವ ಆಲೋಚನೆಗಳನ್ನು ಓದಿ, ವಿದ್ಯುತ್ ಸಂಜ್ಞೆಗಳ ಸಹಾಯದಿಂದ ಅವುಗಳನ್ನು ಚಲನೆ ಮುಂತಾದ ಕ್ರಿಯೆಗಳಿಗೆ ಬೇಕಾದ ಶಕ್ತಿಯನ್ನಾಗಿ ಪರಿವರ್ತಿಸುತ್ತದೆ. ಈಗಾಗಲೇ ವ್ಯಾಪಕವಾಗಿ ಬಳಕೆಯಾಗುತ್ತಿರುವ ಎಲೆಕ್ಟ್ರೋಎನ್ಸೆಫೆಲೋಗ್ರಾಂ (E.E.G) ವಿಧಾನದಿಂದ ನಮ್ಮ ಮೆದುಳಿನಲ್ಲಿ ಉಂಟಾಗುವ ವಿದ್ಯುತ್ ಸಂಪರ್ಕಗಳನ್ನು ನಿಖರವಾಗಿ ಪತ್ತೆಹಚ್ಚಬಹುದು ಹಾಗೂ ಮಿದುಳಿನ ಸ್ಥಿತಿಯನ್ನು ತಿಳಿದು ವೈದ್ಯರು ಸೂಕ್ತ ಚಿಕಿತ್ಸೆಗಳನ್ನು ನೀಡುಬಹುದು.

ಕೇವಲ ವೈದ್ಯಕೀಯ ಕ್ಷೇತ್ರದಲ್ಲಿ ಬಳಕೆಯಾಗುತ್ತಿದ್ದ ಈ ಪ್ರಕ್ರಿಯೆಯನ್ನು ಹಿತಾಚಿ ಕಂಪೆನಿಯು ವಾಣಿಜ್ಯ ಕ್ಷೇತ್ರಕ್ಕೆ ಅಳವಡಿಸಿದೆ. ಇನ್ನು ಮುಂದೆ ನೀವು ಟಿ.ವಿ. ನೋಡುತ್ತಿರುವಾಗ ರಿಮೋಟ್ ಕಂಟ್ರೋಲ್ ಎಲ್ಲಿದೆ ಎಂದು ಹುಡುಕಾಡಬೇಕಾಗಿಲ್ಲ. ಕೇವಲ ನಿಮಗೆ ಬೇಕಾದ ಚಾನಲ್‌ನ ಬಗ್ಗೆ ಚಿಂತಿಸಿದರೆ ಸಾಕು, ಆ ಚಾನಲ್ ನಿಮ್ಮ ಟಿ.ವಿ.ಯಲ್ಲಿ ಕಾಣಿಸಿಕೊಳ್ಳುತ್ತದೆ. ಇದಕ್ಕಾಗಿ ನೀವು ನಿಮ್ಮ ತಲೆಯ ಸುತ್ತ ಒಂದು ಇನ್ಫ್ರಾರೆಡ್ ಕಿರಣಗಳನ್ನು ಗುರುತಿಸುವ ಪಟ್ಟಿಯನ್ನು ಬಳಸಬೇಕಷ್ಟೆ. ಇದರ ಪ್ರಯೋಜನಗಳನ್ನು ಇನ್ನೂ ವಿಸ್ತರಿಸುತ್ತಿದ್ದಾರೆ. ಅಂಗವಿಕಲರು, ಪಾರ್ಶ್ವವಾಯು ಪೀಡಿತರು, ವಯಸ್ಸಾದವರು ಈ ಯಂತ್ರದ ಮೂಲಕ ಚಲಿಸಬಹುದು, ತಮ್ಮ ದೈನಂದಿನ ಕೆಲಸಗಳನ್ನು ತಾವೇ ಮಾಡಿಕೊಳ್ಳಬಹುದು. ಮಾನವತೆಗೆ ಇದೊಂದು ದೊಡ್ಡ ವರದಾನವಾಗಲಿದೆ ಎಂದು ಜೂನ್ ೨೫ರ 'ದ ಹಿಂದೂ' ಪತ್ರಿಕೆ ವರದಿ ಮಾಡಿದೆ. ಅಂತೂ ಮಾನವನ ಮನಸ್ಸು ವಸ್ತುಗಳನ್ನು ತನ್ನ ಬಯಕೆಯಂತೆ ನಿಯಂತ್ರಿಸುತ್ತಲೇ ಇರುತ್ತದೆ. ಇದೇ ತಾನೇ ಚೈತನ್ಯದ ಅಭಿವ್ಯಕ್ತಿ!

## ಸಮುದಾಯ ಜೀವನದ ಪಾಠ : ಇರುವೆಗಳಿಂದ

ನೀವು ಇರುವೆಗಳ ಸಾಲನ್ನು ನೋಡಿದ್ದೀರಲ್ಲವೆ? ಅದರಂತೆಯೇ ಹಿಂಡುಹಿಂಡಾಗಿ ಸಂಚರಿಸುವ ದುಂಬಿಗಳು, ಹಕ್ಕಿಗಳು, ಪ್ರಾಣಿಗಳು ಹಾಗೂ ಮೀನುಗಳೂ ಇವೆ ಎಂಬುದು ನಿಮಗೂ ಗೊತ್ತಿದೆ. ಇವೆಲ್ಲ ಸಮುದಾಯ ಜೀವಿಗಳು. ಇವುಗಳ ಜೀವನ ಶೈಲಿಯಲ್ಲಿರುವ ಆಶ್ಚರ್ಯಕರ ಮಾಹಿತಿಯೊಂದಿದೆ. ಇರುವೆಯ ಸಾಲನ್ನು ಗಮನಿಸಿ ನೋಡಿ. ಎಲ್ಲಿಗೆ ಹೋಗಬೇಕು, ಹೇಗೆ ಹೋಗಬೇಕು ಎಂದು ಆ ಸಾಲಿನಲ್ಲಿರುವ ಪ್ರತಿಯೊಂದು ಇರುವೆಗೂ ತಿಳಿದಿದೆಯೆಂದು ನೀವು ಭಾವಿಸಿದ್ದರೆ, ಅದು ಸುಳ್ಳು. ಮುಂದಿನ ಇರುವೆಯನ್ನು ಅನುಸರಿಸುವುದು ಹಾಗೂ ರಸ್ತೆಯಲ್ಲಿ ಈಗಾಗಲೇ ಇರುವೆಗಳು ಬಿಟ್ಟಿರುವ ರಾಸಾಯನಿಕ ಫೆರಾಮೋನ್ ಎಂಬ ವಸ್ತುವನ್ನು ಗುರುತಿಸುತ್ತ, ಅತ್ತಲಿಂದ ಬರುತ್ತಿರುವ ತಮ್ಮ ಗುಂಪಿನವರ ಸ್ಪರ್ಶಾಂಗಗಳ (antennae) ಮೂಲಕ ಸಂವೇದನೆಗಳನ್ನು ಪಡೆದುಕೊಂಡು ಈ ಇರುವೆಗಳು ಚಲಿಸುತ್ತವೆ. ಅಷ್ಟೇ ಅಲ್ಲ, ಪ್ರತಿದಿನ ಬೆಳಗಾದ ಕೂಡಲೆ ಎಷ್ಟು ಇರುವೆಗಳು ಆಹಾರವನ್ನು ಸಂಗ್ರಹಿಸಲು ಹೋಗಬೇಕು, ಯಾರು ಹೋಗಬೇಕು ಎಂದೆಲ್ಲ ತೀರ್ಮಾನಗಳು ಆಗಬೇಕಾಗಿರುತ್ತದೆ.

ಪ್ರತಿಯೊಂದು ಗೂಡಿನಲ್ಲಿಯೂ ಸರಾಸರಿ ೫೦,೦೦೦ ದಿಂದ ೭೦,೦೦೦ ದವರೆಗೂ ಇರುವೆಗಳು, ದುಂಬಿಗಳು ಇರುತ್ತವಂತೆ. ಇಂದು ಆಹಾರವನ್ನು ತರುವ ಇರುವೆ ನಾಳೆಯ ದಿನ ಸೈನಿಕನಾಗಿ ಪಹರೆ ಕಾಯಬಲ್ಲದು, ಗೂಡನ್ನು ಸ್ವಚ್ಛಗೊಳಿಸಬಲ್ಲದು – ಹೀಗೆ ನಾನಾ ಕಾರ್ಯಗಳಲ್ಲಿ ತೊಡಗುತ್ತದೆ. ಇವುಗಳ ಕೆಲಸಕಾರ್ಯಗಳನ್ನೆಲ್ಲ ನಿಯಂತ್ರಿಸುವವರು ಯಾರು? ಯಾರೂ ಇಲ್ಲ! ಆಶ್ಚರ್ಯವಾಯಿತೆ, ಇದು ಸತ್ಯ. ರಾಣಿಯು ಕೇವಲ ಮರಿಹಾಕುತ್ತಿರುತ್ತದೆ. ಬೇರೆ ಯಾವ ಮ್ಯಾನೇಜರ್, ಡೈರೆಕ್ಟರ್ ಇರುವೆ ಅಥವಾ ದುಂಬಿ ಅಲ್ಲಿಲ್ಲ. ಪ್ರತಿಯೊಂದು ಇರುವೆಯೂ ವೈಯಕ್ತಿಕವಾಗಿ ಸಂವೇದನೆಗಳನ್ನು ಗ್ರಹಿಸಿ ತನ್ನ ದೈನಂದಿನ ಕೆಲಸವನ್ನು ತೀರ್ಮಾನಿಸಿಕೊಳ್ಳುತ್ತದೆ. ಒಂಟಿಯಾಗಿ ಅದರಲ್ಲಿ ಹೆಚ್ಚು ಬುದ್ಧಿಯಾಗಲಿ, ಸಾಮರ್ಥ್ಯವಾಗಲಿ ಇಲ್ಲದಿದ್ದರೂ ಗುಂಪಿನ ಜೊತೆಯಲ್ಲಿದ್ದಾಗ ಅದೊಂದು ಪ್ರಬಲ ಸೈನ್ಯವೇ ಆಗಿಬಿಡುತ್ತದೆ. ಸಾವಿರಾರು ಎಕರೆಗಳಷ್ಟು ಧಾನ್ಯವನ್ನು ನಾಶ ಮಾಡುವ ಮಿಡತೆಗಳೂ ಇಂತಹ ಸಮುದಾಯ ಸೂತ್ರವನ್ನೇ ಅನುಸರಿಸುತ್ತವೆ. ಅಪಾಯ ಒದಗಿದಾಗ ಸಣ್ಣ ಹಕ್ಕಿಗಳ ಗುಂಪು ತಕ್ಷಣ ದಿಕ್ಕನ್ನು ಬದಲಾಯಿಸುವುದು, ನದಿಗಳನ್ನು ದಾಟಿ ವಲಸೆ ಹೋಗುವ ಜಿಂಕೆ ಇತ್ಯಾದಿ ಸಸ್ಯಾಹಾರಿ ಜೀವಿಗಳು ಇವೆಲ್ಲದರ ಹಿನ್ನೆಲೆಯಲ್ಲಿ ಇದೇ ಸೂತ್ರ ಕೆಲಸ ಮಾಡುವುದನ್ನು ಸಂಶೋಧಕರು ಗುರುತಿಸಿದ್ದಾರೆ. ಸಮುದಾಯದ ಬಲ ಹಾಗೂ ರಕ್ಷಣೆಯಲ್ಲಿ ವ್ಯಕ್ತಿ ಅಥವಾ ಪ್ರಾಣಿಯು ಅತ್ಯಂತ ಕ್ಷೇಮವಾಗಿರಬಹುದೆಂದು ಇದು ತೋರಿಸುತ್ತದೆ. ಆದರೆ ಇದಕ್ಕೆ ಅವಶ್ಯಕವಾಗಿರುವುದು ಪ್ರತಿಯೊಬ್ಬ ಸದಸ್ಯನಲ್ಲಿಯೂ ಇರಬೇಕಾದ ಜವಾಬ್ದಾರಿಯುತ ಸಹಬಾಳ್ವೆ. ಇದೀಗ ಸಮಾಜಶಾಸ್ತ್ರ ಸಂಶೋಧಕರು, ವಾಣಿಜ್ಯೋದ್ಯಮಿಗಳು ಈ ತತ್ತ್ವಗಳನ್ನು ಮಾನವ ಸಮಾಜಕ್ಕೂ ಅನ್ವಯಿಸುತ್ತಿದ್ದಾರೆ.